





ಕಲಬುರ್ಗಿಗೆ ಬರುವವರಿಗೆ 'ನೂರು ಕಣ್ಣು ಸಾಲದು' ಎನ್ನುವಂಥ ಪರಿಸ್ಥಿತಿ. ತೊಗರಿಯ ಕಣಜದ ಆಕರ್ಷಣೆಗಳು ಒಂದೆರಡಲ್ಲ. ಒಂದೆಡೆ, ಸಮರಸದ ಜೀವತಾಣಗಳಂತಿರುವ ದರ್ಗಾ ಮಸೀದಿಗಳು. ಇನ್ನೊಂದೆಡೆ, ಇತಿಹಾಸದ ವೈಭವದ ಕುರುಹಿನಂತಿರುವ ಕೋಟೆ, ಬದುಕಿನ ಚೆಲುವನ್ನೆಲ್ಲ ಹಿಡಿದಿಡುವ ಹಂಬಲದ ಗ್ಯಾಲರಿಗಳು–ಕಲಾವಿದರು, ಜ್ಞಾನದೇಗುಲದಂತಹ ವಿಶ್ವವಿದ್ಯಾಲಯ – ಹೀಗೆ ಕಲಬುರ್ಗಿಯ ಆಕರ್ಷಣೆಗಳು ಒಂದೆರಡಲ್ಲ.

ಒಂದಷ್ಟು ಕಾಲ ದಖನ್‌ನ ರಾಜಧಾನಿಯಾಗಿದ್ದ, ಮಧ್ಯಕಾಲೀನ ಅವಧಿಯಲ್ಲಿ ಬಹಮನಿ ಸುಲ್ತಾನರ ರಾಜಧಾನಿಯಾಗಿದ್ದ ಈ ಪ್ರದೇಶ ವೈವಿಧ್ಯದಲ್ಲಿ ಏಕತೆಯನ್ನು ಪ್ರತಿಪಾದಿಸುವ ಊರು. ಊರಿನ ನಾಮಪುರಾಣ ಕೆದಕಿದರೆ, 'ಕಲ್ಲಿನ ನಡುವೆ ನೀರು ಹರಿಯುವೆಡೆ ಜನವಸತಿಯ ಪ್ರದೇಶ' ಎನ್ನುವ ಅರ್ಥ ಎದುರಾಗುತ್ತದೆ. 'ಗುಲ್‌ಬರ್ಗಾ' ಎನ್ನುವ ಹೆಸರಿಗೆ 'ಹೂವಿನ ತೋಟ' ಎನ್ನುವ ಅರ್ಥವೂ ಇದೆಯಂತೆ. ಕಲ್ಲು ಮತ್ತು ಹೂವು ಎರಡೂ ಹದವಾಗಿ ಮಿಳಿತಗೊಂಡ ಊರು ಕಲಬುರಗಿ ಎನ್ನಲಿಕ್ಕಡ್ಡಿಯಿಲ್ಲ.

ಬಹಮನಿಯ ಫಿರೋಜ್ ಶಹಾ ಅಳವಡಿಸಿಕೊಂಡ 'ಸೌಹಾರ್ದ ನೀತಿ' ಮೊಗಲರಿಗೂ ಆದರ್ಶಪ್ರಾಯವಾಗಿತ್ತು ಎಂದು ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಇದೇ ಫಿರೋಜ್ ಶಹಾ ಭೀಮಾ ನದಿಯ ದಂಡೆಯ ಮೇಲೆ ಕಟ್ಟಿದ ಫಿರೋಜಾಬಾದ್ ಪಟ್ಟಣವನ್ನು ಮಧ್ಯಕಾಲೀನ ಭಾರತದ ಮೊದಲ ವ್ಯವಸ್ಥಿತ ನಗರ ಎಂದು ಎನ್ನಲಾಗುತ್ತದೆ. ಫಿರೋಜ್‌ನ ಕಾಲದಲ್ಲಿಯೇ, ಖ್ವಾಜಾ ಬಂದೇ ನವಾಜ್‌ರು ಗುಲ್ಬರ್ಗಕ್ಕೆ ಬಂದುದು. ಅಲ್ಲಿಂದ ಮುಂದೆ ಊರಿನ ಚಹರೆಯೇ ಬದಲಾಯಿತು. ಉರ್ದು–ಸೂಫಿಯ ಸೊಗಡಿನೊಂದಿಗೆ ಊರಿನ ಚೆಲುವು ಪಲ್ಲವಿಸಿತು.

ದಖನ್ ವಾಸ್ತುಶಿಲ್ಪ ಕಲಬುರ್ಗಿಯ ಮತ್ತೊಂದು ವಿಶೇಷ. ಕೋಟೆಯೊಳಗಿನ 'ಬಡಾ ಮಸೀದಿ' ದಖನ್ ವಾಸ್ತುಶಿಲ್ಪದ ಅಪೂರ್ವ ಮಾದರಿಗಳಲ್ಲೊಂದು. ಮಸೀದಿಯ ಕಮಾನುಗಳ ನಡುವಿನ ನೆರಳು–ಬೆಳಕಿನ ಆಟ ಹಾಗೂ ಕಟ್ಟಡದೆಲ್ಲೆಡೆ ಮುಟ್ಟುವಂತಹ ಧ್ವನಿವ್ಯವಸ್ಥೆ ಅದ್ಭುತವಾದುದು.

ಧಾರ್ಮಿಕವಾಗಿ ಕೂಡ ಕಲಬುರ್ಗಿಯದು ಸಮೃದ್ಧ ಪರಂಪರೆ. ಇಲ್ಲಿನ ಶರಣಬಸವೇಶ್ವರರು ದಾಸೋಹತತ್ವಕ್ಕೆ ಹೊಸ ಮೆರುಗು ನೀಡಿದವರು. ಅಶೋಕನ ಶಿಲ್ಪ ಹೊಂದಿರುವ ಸನ್ನತಿ ಬೌದ್ಧನೆಲೆಯಿಂದ ಸ್ಫೂರ್ತಿಗೊಂಡು ರೂಪುಗೊಂಡಿರುವ ಬೌದ್ಧವಿಹಾರ ನಗರದ ಸಮರಸ ತತ್ವಕ್ಕೆ ಪೂರಕವಾಗಿದೆ.

ಶೈಕ್ಷಣಿಕವಾಗಿ ಕೂಡ ಕಲಬುರಗಿಯ ಖ್ಯಾತಿ ಅಪಾರ. ಗುಲ್ಬರ್ಗ ವಿಶ್ವವಿದ್ಯಾಲಯ, ಕರ್ನಾಟಕ ಕೇಂದ್ರೀಯ ವಿವಿ, ಶರಣಬಸವೇಶ್ವರ ಡೀಮ್ಡ್ ವಿವಿಗಳೊಂದಿಗೆ ವೈದ್ಯಕೀಯ–ಎಂಜಿನಿಯರಿಂಗ್ ಕಾಲೇಜುಗಳೂ ಅಲ್ಲಿವೆ. ವಿ.ಜಿ. ಅಂದಾನಿ, ಜೆ.ಎಸ್. ಖಂಡೇರಾವ್ ಅವರಂತಹ ಕಲಾಗುರುಗಳ ಕಲಬುರಗಿ ಲಲಿತಕಲಾ ವಿದ್ಯಾರ್ಥಿಗಳ ಗುರುಕುಲದಂತೆಯೂ ಪ್ರಸಿದ್ಧವಾದುದು. ಜೋಳದ ರೊಟ್ಟಿ, ಪುಂಡಿ ಪಲ್ಯ, ಶೇಂಗಾ ಹಿಂಡಿ, ಮಾಮುಪುರಿಯ ಸಿಹಿ, ಬಿರಿಯಾನಿ, ಇರಾನಿ ಚಹಾ – ಹೀಗೆ ಕಲಬುರಗಿಯ ಆಹಾರ ವೈವಿಧ್ಯವೂ ದೊಡ್ಡದು. ಕಲಬುರಗಿಗೆ ಹೋದವರು ಈ ಆಹಾರ ವೈವಿಧ್ಯವನ್ನು ಸವಿಯಬೇಕು, ಬಂದೇ ನವಾಜ್ ದರ್ಗಾ, ಜಾಮಾ ಮಸೀದಿಗಳೊಂದಿಗೆ ಶರಣಬಸವೇಶ್ವರರನ್ನೂ ಕಣ್ತುಂಬಿಕೊಳ್ಳಬೇಕು. ಆಗಷ್ಟೇ ಸಾಹಿತ್ಯಜಾತ್ರೆಯ ಪ್ರಯಾಣ ಮತ್ತಷ್ಟು ಅರ್ಥಪೂರ್ಣವಾದೀತು.